# ಬೀಡಿ ಕಟ್ಟಿ ಬೆಳೆದವಳು!



## ದಿವ್ಯಾ ಅಂಚನ್

### ಝೀ ಕನ್ನಡದ ಕಾಮಿಡಿ ಕಿಲಾಡಿಗಳ ನಟಿ

**◆ ಕಾಮಿಡಿ ಕಿಲಾಡಿಗೆ ಬಂದಿದ್ದು ಹೇಗೆ?**

'ಕಾಮಿಡಿ ಕಿಲಾಡಿಗಳು' ಮೊದಲ ಸೀಸನ್‌ನಲ್ಲಿ ಅನೀಶ್ ಪೂಜಾರಿ ಇದ್ದರು. ಈಗ ಅವರು ಕಲಾಕಾರ್ ಎನ್ನುವ ಎಂಬ ಸಂಸ್ಥೆ ಕಟ್ಟಿಕೊಂಡು ನೃತ್ಯ, ಸಂಗೀತ, ನಟನೆಯನ್ನು ಕಲಿಸುತ್ತಿದ್ದಾರೆ. ನಾನು ನನ್ನ ತಂಗಿಗೆ ಡಾನ್ಸ್ ಕಲಿಸಬೇಕು ಎಂದು ಅವರ ಸಂಸ್ಥೆಗೆ ಭೇಟಿ ನೀಡಿದೆ. ನನಗೂ ಡಾನ್ಸ್ ಕಲಿಯುವ ಆಸೆ ಇತ್ತು. ಆದರೆ ಅಂತಹ ಅವಕಾಶ ಸಿಕ್ಕಿರಲಿಲ್ಲ. ನನ್ನ ತಂಗಿಯನ್ನು ಅಲ್ಲಿಗೆ ಸೇರಿಸಿದ ಮೇಲೆ ಅವಳ ಜೊತೆ ನಾನು ಹೋಗುತ್ತಿದ್ದೆ. ಅವಳ ಡಾನ್ಸ್ ನೋಡಿ ನನಗೂ ಮಾಡಬೇಕು ಎನ್ನುವ ಆಸೆ ಚಿಗುರೊಡೆಯುತ್ತಿತ್ತು. ಮನೆಯಲ್ಲಿ ಪ್ರೋತ್ಸಾಹ ಇದ್ದರೂ ಅದನ್ನು ನೀಗಿಸಿಕೊಳ್ಳುವ ಆರ್ಥಿಕ ಶಕ್ತಿ ನನಗೆ ಮೊದಲು ಇರಲಿಲ್ಲ.

ಕ್ರಮೇಣ ನಾನು ಡಾನ್ಸ್ ಕಲಿಯುವ ಎಂದು ಕ್ಲಾಸ್‌ಗೆ ಸೇರಿಕೊಂಡೆ. ಮನೆಯಲ್ಲಿ ಕನ್ನಡಿ ಮುಂದೆ ನಿಂತು ಅನುಕರಣೆಯ ಮೂಲಕ ಅಭಿನಯವನ್ನೂ ಕಲಿಯಲು ಆರಂಭಿಸಿದೆ. ನಟನೆಯನ್ನು ಕಲಿಯುವ ಹುಚ್ಚಿದ್ದವಳಿಗೆ ಒಂದು ವೇದಿಕೆ ಸಿಕ್ಕಂತೆ ಆಯಿತು. ಅದರ ಮೂಲಕ ಸಾರ್ವಜನಿಕ ಕಾರ್ಯಕ್ರಮಗಳೂ ಆರಂಭ ಆದವು. ನನ್ನ ಕುಟುಂಬದವರೆಲ್ಲ ಖುಷಿ ಪಟ್ಟರು. ಅದೇ ಸಮಯದಲ್ಲಿ ಕಾಮಿಡಿ ಕಿಲಾಡಿಗಳಿಗೆ ಆಡಿಷನ್ ಬಂತು. ಮೊದಲು ಅನೀಶಣ್ಣನೇ ಒಂದು ಸ್ಕ್ರಿಪ್ಟ್ ಮಾಡಿ ನನಗೆ ಆಡಿಷನ್ ಪೂರ್ವತಯಾರಿ ಮಾಡಿದ್ದರು.

**◆ ಆಡಿಷನ್ ಪ್ರಕ್ರಿಯೆ ಹೇಗಿತ್ತು?**

ಅದುವರೆಗೂ ಕಾಮಿಡಿ ಮಾಡೇ ಇರಲಿಲ್ಲ. ಮಾಡ್ತೀನಿ ಎನ್ನುವ ನಂಬಿಕೆ ಇದ್ದಿದ್ದರಿಂದ ಅನೀಶ್ ಹೇಳಿದಂತೆ ತಯಾರಿಮಾಡಿಕೊಂಡೆ. ಮೊದಲೆಲ್ಲ ಕೆಲವು ಆಡಿಷನ್ ಹೋಗಿದ್ದೆ. ಆದರೆ ಅವುಗಳ ರೀತಿ– ನೀತಿಗಳು ಗೊತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಅದನ್ನೆಲ್ಲ ಕಲಿಸಿ ಕಲಾಕಾರ್ ಸಂಸ್ಥೆ ಆಡಿಷನ್‌ಗೆ ಕಳಿಸಿಕೊಟ್ಟಿತು. ಮಂಗಳೂರಿನಲ್ಲಿ ಮೊದಲು ಆಡಿಷನ್. ಅವತ್ತು ಅಲ್ಲಿ ಡಾನ್ಸ್ ಕೂಡ ಮಾಡಿಸಿದ್ದರು. ಮೊದಲ ಸುತ್ತಿನಲ್ಲಿ ನಾನು ಆಯ್ಕೆ ಆಗಿದ್ದೆ. ಬೆಂಗಳೂರಿಗೆ ಎರಡನೇ ಸುತ್ತಿಗೆ ಆಡಿಷನ್ ಬಂದೆ. ಬೆಂಗಳೂರಿಗೆ ಬೆಳಿಗ್ಗೆ ಬಂದು ಇಳಿದಿದ್ದೇನೆ. ಅಷ್ಟರಲ್ಲಿ ಮೊಬೈಲಿಗೆ ಒಂದು ಸಂದೇಶ ಬಂತು ಅವತ್ತು ಆಡಿಷನ್ ರದ್ದಾಗಿತ್ತು. ಅದು ಅನಿರೀಕ್ಷಿತವಾಗಿತ್ತು, ಬೇಸರ ಮಾಡಿಕೊಳ್ಳದೆ ರಾತ್ರಿ ನಮ್ಮೂರಿಗೆ ಮರಳಿ ಪ್ರಯಾಣ ಮಾಡಿದೆ.

ಪುನಃ ಆಡಿಷನ್‌ಗೆ ಕರೆದರು. ಮೊದಲು ಮೀನು ಮಾರಾಟಗಾರ್ತಿಯ ರೂಪಕ ಮಾಡಿದೆ. ಕರಾವಳಿ ಸಂಸ್ಕೃತಿಯನ್ನು ಮೀನು ಪ್ರಧಾನವಾಗಿ ಪ್ರಭಾವಿಸಿದೆ. ಅದನ್ನು ಅನುಭವಿಸಿ ಬೆಳೆದ ನನಗೆ ಸುಲಭ ಆಗುತ್ತದೆ ಎಂದು ಅದನ್ನೇ ಮಾಡಿದ್ದೆ. ತೀರ್ಪುಗಾರರಾದ ಯೋಗರಾಜ ಭಟ್, ಜಗ್ಗೇಶ್ ಮತ್ತು ರಕ್ಷಿತಾ ಒಳ್ಳೆಯ ಪ್ರತಿಕ್ರಿಯೆ ನೀಡಿದ್ದರು. ಅದು ಜೀವನದಲ್ಲಿ ಸಾರ್ಥಕ ಎನ್ನುವ ಭಾವವನ್ನು ನನಗೆ ಆ ಸಂದರ್ಭದಲ್ಲಿ ಮೂಡಿಸಿತ್ತು. ಕಾಮಿಡಿ ಕಿಲಾಡಿಯಲ್ಲಿ ಅವಕಾಶವೂ ಸಿಕ್ಕಿತು. ಇಲ್ಲಿ ಅಭಿನಯ– ಡಾನ್ಸ್ ಮಾಡುವ ಯೋಗ ನನ್ನ ಪಾಲಿಗೆ ಒಲಿದು ಬಂದಿದೆ.

**◆ ರೂಪಕಗಳನ್ನು ಹೇಗೆ ರೂಪಿಸಿಕೊಳ್ಳುತ್ತೀರಿ?**

ಸ್ಕಿಟ್ ತಯಾರಿಸಲು ಲೇಖಕರು ಇರುತ್ತಾರೆ. ಅದನ್ನು ನಿರ್ದೇಶಕರು ಅಂತಿಮ ಗೊಳಿಸಿ ಸ್ಕ್ರಿಪ್ಟ್ ಕೊಡುತ್ತಾರೆ. ಅವರೇ ತಂಡವನ್ನು ಮಾಡುತ್ತಾರೆ. ನಂತರ ಮೂರು– ನಾಲ್ಕು ದಿನ ತಾಲೀಮು ಮಾಡುತ್ತೇವೆ. ಒಮ್ಮೊಮ್ಮೆ ರಾತ್ರೋ ರಾತ್ರಿ ಸ್ಕಿಟ್ ಬದಲಾಗಿಬಿಡುತ್ತೆ. ಅಂತಹ ಸಂದರ್ಭದಲ್ಲಿ ಯಾವ ಪಾತ್ರಕ್ಕಾದರೂ ಸೈ ಅನ್ನುವಂತೆ ಇರಬೇಕು. ಒಂದೇ ವೇದಿಕೆಯಲ್ಲಿ ಎರಡು ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಅದೆಲ್ಲದಕ್ಕೂ ನಾವು ತಯಾರಿರಬೇಕಾಗುತ್ತದೆ. ಅಂದರೆ ಇದು ಬೇರೆ ಧಾರಾವಾಹಿ ಮತ್ತು ಸಿನಿಮಾಗಳಂತೆ ಅಲ್ಲ. ಇದಕ್ಕೆ ಇದರದ್ದೇ ಆದ ವ್ಯಾಕರಣ ಬೇರೆಯದೇ ಇದೆ. ರಂಗಭೂಮಿ ಮತ್ತು ಟೀವಿಯನ್ನು ಸಮೀಕರಿಸಿದಂತೆ ಇದು ಇರುತ್ತದೆ.

**◆ ಎಂತಹ ಪಾತ್ರಗಳು ನಿಮಗೆ ಇಷ್ಟ ಆಗುತ್ತವೆ?**

ಗಂಭೀರ ಪಾತ್ರಗಳೇ ನನಗೆ ಇಷ್ಟ. ಹಾಸ್ಯ ಒಂದು ರೀತಿಯಲ್ಲಿ ಸುಲಭವೇ ಆದರೆ, ನಟನೆ ಮಾಡುತ್ತಿದ್ದೇವೆ ಎಂದು ಭಾವಿಸಬಾರದು. ನಿತ್ಯ ನಮ್ಮ ಜೀವನದ ಒಂದು ಘಟನೆಯಂತೆ ತೆಗೆದುಕೊಳ್ಳಬೇಕು. ಆರಂಭದಲ್ಲಿ ಮಂಗಳೂರು ಪ್ರದೇಶದ ಕಥೆಯ ಮೂಲಕ ಪ್ರವೇಶ ಮಾಡಿದ ನನಗೆ ಕಷ್ಟ ಅನ್ನಿಸಲಿಲ್ಲ. ಬೆಂಗಳೂರಿನ ಪ್ರಾದೇಶಿಕ ಭಾಷೆಯನ್ನು ಕಲಿಯಲು ಪ್ರಯತ್ನ ಪಟ್ಟೆ. ಡೈಲಾಗ್ ವೇಗದಲ್ಲಿ ಹೇಳಿದರೆ ಮಾತ್ರ ಕಾಮಿಡಿ ಪಂಚ್ ಆಗುತ್ತದೆ. ಆರಂಭದಲ್ಲಿ ಸ್ವಲ್ಪ ಕಷ್ಟ ಆಗುತ್ತಿತ್ತು. ತುಳು ಸಿನಿಮಾದಲ್ಲಿ ನಟಿಸಿದ್ದೇನೆ. ತುಳುವಿನಲ್ಲಿ ಕಾಮಿಡಿ ನಟನೆ ಎಂದರೆ ಮೀನಿಗೆ ನೀರಿನಲ್ಲಿ ಈಜಲು ಹೇಳಿದಂತೆ ಆಗುತ್ತದೆ. ಅದೇ ಡೈಲಾಗ್‌ಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದರೆ ಕಾಮಿಡಿ ಪಂಚ್ ಬರುವುದಿಲ್ಲ ಎಂದೆನಿಸಿದೆ.

**◆ ಮುಂದಿನ ನಿಮ್ಮ ಕನಸುಗಳ ಬಗ್ಗೆ...**

ನಟನೆಯಲ್ಲಿಯೇ ಬದುಕು. ಇನ್ನೂ ಓದುತ್ತಿದ್ದೇನೆ, ಸಿಎ ಮಾಡಬೇಕು. ಶ್ರುತಿ ಮತ್ತು ಉಮಾಶ್ರೀ ಅವರ ಜೊತೆ ನಟಿಸಬೇಕು ಎನ್ನುವ ಆಸೆ ಇದೆ. ಲಾಕ್‌ಡೌನ್‌ನಿಂದ ಅವಕಾಶಗಳು ಇಲ್ಲದಾಗಿವೆ. ಕಾಲೇಜು ದಿನಗಳಿಂದಲೂ ನನಗೆ ದುಡಿಮೆ ಅನಿವಾರ್ಯವಾಗಿತ್ತು. ಆಗ ಬೀಡಿ ಕಟ್ಟುವುದು ಮನೆ– ತೋಟದ ಕೆಲಸ ಮಾಡುವುದು ಸಹಜವಾಗಿತ್ತು. ಅರ್ಧ ದಿನ ಕೆಲಸ ಅರ್ಧ ದಿನ ಓದು ನನಗೆ ಅಭ್ಯಾಸ ಆಗಿದೆ. ಮೊದಲಿನಿಂದ ಆ ಅನುಭವ ಇರುವ ನನಗೆ ಜೀವನ ಕಷ್ಟ ಎಂದು ಅನ್ನಿಸುವುದಿಲ್ಲ. ಲಾಕ್‌ಡೌನ್ ಎಂದು ಕೆಲಸ ಇಲ್ಲ ಎನ್ನುವ ಮಾತೇ ಇಲ್ಲ. ಬೇರೆ ಇನ್ನೊಂದು ಕೆಲಸ ಮಾಡುವ ಕೌಶಲ್ಯ ಇದೆ.

**■ ರಾಘವೇಂದ್ರ ಕೆ.**